ಆಗಿಲ್ಲ, ಮತ್ತು ಹಾರ್ಟಿಕಲ್ಚರ್ ರೀಸರ್ಚ್ ವೇರ್ ಏನು ಆಗಬೇಕಾಗಿತ್ತು ಅದು ಕೂಡ ಆಗಿಲ್ಲ. ಕೊನೆಯಪಕ್ಷ ಆಗ್ರಿಕಲ್ಚರ್ ಕಾಲೇಜಿನಲ್ಲಿ ಸರಿಯಾದ ಕಟ್ಟಡ ಇಲ್ಲ. ನಮ್ಮಲ್ಲಿ 1990 ರಲ್ಲಿ ಕೃಷಿ ಕಾಲೇಜು ಪ್ರಾರಂಭವಾಗಿ ಕಟ್ಟಡ ಅರ್ಧದಷ್ಟು ನಿರ್ಮಾಣವಾಗಿ ಹಾಗೆಯೇ ನಿಂತುಬಿಟ್ಟಿದೆ. ಆ ಕಟ್ಟಡಕ್ಕೆ ಇನ್ನೂ ಐದು ಕೋಟಿ ರೂಪಾಯಿಗಳಷ್ಟು ಹಣ ಬೇಕಾಗಿದೆ. ಕೊನೆಯಪಕ್ಷ ಹಾಸ್ಟೆಲ್‌ನಲ್ಲಿರತಕ್ಕಂಥ ಮಕ್ಕಳ ಅನುಕೂಲಕ್ಕಾಗಿ 50 ಲಕ್ಷ ರೂಪಾಯಿಗಳಾದರೂ ಬೇಕು. ಈ ವರ್ಷದ ಆಯವ್ಯಯದಲ್ಲಿ ಅದನ್ನಾದರೂ ಒದಗಿಸಿಕೊಡುವುದಕ್ಕೆ ತಾವು ಸಲಹೆ ಮಾಡಿದರೆ ನಾವು ತಮಗೆ ಕೃತಜ್ಞರಾಗಿರುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ತಾವು ಹೇಳಿದ ರೀತಿಯಲ್ಲಿ Remantated ಕೆ.ವಿ.ಕೆ.ಗಳಿಗೆ ಮೂರು ವರ್ಷಗಳು ಅಂತ ಇರತಕ್ಕದ್ದು ಏನಿದೆ, ಅದು ಐ.ಸಿ.ಎ.ಆರ್. ನವರು ನಿಗದಿ ಮಾಡಿರತಕ್ಕದ್ದು. ಯಾವುದೇ ಸಂದರ್ಭದಲ್ಲಿ ಅದನ್ನು ಮುಚ್ಚುವುದಕ್ಕೆ ಅವಕಾಶವಿಲ್ಲ ಮೂರು ವರ್ಷಗಳಾದಮೇಲೂ ಸಹಿತ ಒಂದು ಪಕ್ಷೆ ಅವರು ಏನಾದರೂ ಐ.ಸಿ.ಎ.ಆರ್.ನಿಂದ ಬೆಂಬಲ ಕೊಡದೇ ಇದ್ದರೆ ನಮ್ಮ ರಾಜ್ಯ ಸರ್ಕಾರದ ನಮ್ಮ ಬಜೆಟ್‌ನಿಂದಲೇ ಅದನ್ನು ನಡೆಸುವುದಕ್ಕೆ ನಾವು ತಯಾರಿದ್ದೇವೆ. ಏಕೆಂದರೆ ಕೃಷಿ ವಿಜ್ಞಾನ ಕೇಂದ್ರ ಟೆಕ್ನಾಲಜಿ ಟ್ರಾನ್ಸ್‌ಫರ್‌ನಲ್ಲಿ ಸಾಕಷ್ಟು ಮಹತ್ವದ ಪಾತ್ರ ವಹಿಸುತ್ತವೆ. ಈ ಸಂದರ್ಭದಲ್ಲಿ ಐ.ಸಿ.ಎ.ಆರ್. ಅದನ್ನು ಮುಂದುವರೆಸಿಕೊಂಡು ಹೋಗುವ ವಿಶ್ವಾಸ ಇದೆ. ಒಂದು ಪಕ್ಷ ಅವರು ಮುಂದುವರೆಸದಿದ್ದರೆ ವಿಶ್ವ ವಿದ್ಯಾನಿಲಯದಿಂದ ಮುಂದುವರೆಸುವುದಕ್ಕೆ ನಾವು ತಯಾರಿದ್ದೇವೆ. ತಾವು ಕೇಳಿದ ಕಾಲೇಜು ಕಟ್ಟಡದ ಬಗ್ಗೆ ಈ ಸಲ ಬಜೆಟ್‌ನಲ್ಲಿ ಏನು ಹಣ ಬರುತ್ತದೆ ಎಂದು ನೋಡಿ ನಿಗದಿ ಮಾಡಬೇಕಾಗುತ್ತದೆ. ನನಗೂ ಕೂಡ ಅದರ ಅರಿವು ಆಗಿದೆ. ಅರ್ಧಂಬರ್ಧ ಆಗಿರತಕ್ಕಂಥ ಕಟ್ಟಡಗಳು ಏನಿವೆ. ವಿಶೇಷವಾಗಿ ಬಿಜಾಪುರದಲ್ಲಿ ತೋಟಗಾರಿಕೆಗೆ ಹೆಚ್ಚು ಒತ್ತು ಕೊಡುವಂಥ ಸಂದರ್ಭ ಇರುವುದರಿಂದ, ಅಲ್ಲಿ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಕೂಡ ಬರುತ್ತಿದ್ದಾರೆ. ಹಾಗಾಗಿ ಕಟ್ಟಡದ ಅವಶ್ಯಕತೆ ಇರುವುದು ನಮಗೆ ಗೊತ್ತಿದೆ. ಈ ಸಾರಿ ಬಜೆಟ್‌ನಲ್ಲಿ ಹಣ ಬರತಕ್ಕದ್ದು ನೋಡಿ ಆದ್ಯತೆ ಮೇಲೆ ಕೊಡತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೆ 47 (352) ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ ಮತ್ತು ಪ್ರಶ್ನೆ 49(334) ಶ್ರೀ ಕೆಬಿ. ಕೋಳಿವಾಡ್‌ರವರ ಪ್ರಶ್ನೆಗಳು ಒಂದೇ ರೀತಿಯ ಪ್ರಶ್ನೆಗಳಾಗಿವೆ. ಆದ್ದರಿಂದ ಮೊದಲು ಶ್ರೀ ಮಹದೇವ್ ಪ್ರಸಾದ್ ರವರು ಕೇಳುತ್ತಾರೆ. ಆನಂತರ ಮಾನ್ಯ ಕೋಳಿವಾಡ್‌ರವರು ಪ್ರಶ್ನೆ ಕೇಳಲಿ. ಮಂತ್ರಿಗಳು ಎರಡಕ್ಕೂ ಸೇರಿಸಿ ಉತ್ತರವನ್ನು ನೀಡಲಿ.

ಜಿಲ್ಲಾ ಕಛೇರಿಗಳ ಸಮುಚ್ಚಯ ನಿರ್ಮಾಣ

47 (352) ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚಾಮರಾಜನಗರದಲ್ಲಿ ಜಿಲ್ಲಾ ಕಛೇರಿಗಳ ಸಮುಚ್ಚಯ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ಕೈಗೊಂಡಿರುವ ಕ್ರಮಗಳೇನು;

ಇ) ಈವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು

ಆ) ಹುಡ್ಕೊ ಸಂಸ್ಥೆಯ ಸಾಲದ ಸಹಾಯ ಪಡೆಯುವ ಹಾಗೂ ನಿವೇಶನಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ;

ಇ) ಇಲ್ಲ

ಹಾವೇರಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಕಛೇರಿ ಸ್ಥಾಪನೆ

49 (334) ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹಾವೇರಿ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಲಾದ ಜಿಲ್ಲಾಮಟ್ಟದ ಕಛೇರಿಗಳನ್ನು ಸ್ಥಾಪಿಸಲು ಸರ್ಕಾರವು ಯಾವ ಕಾರ್ಯಕ್ರಮ ಹಮ್ಮಿಕೊಂಡಿದೆ;

ಆ) ಈ ಕಾರ್ಯಕ್ರಮಕ್ಕೆ ಎಷ್ಟು ಹಣ ನಿಗದಿಪಡಿಸಲಾಗಿದೆ;

ಇ) ಈ ಕಾರ್ಯಕ್ರಮವನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೊಸದಾಗಿ ನಿರ್ಮಿತವಾದ ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣಗಳನ್ನು ನಿರ್ಮಿಸಲು ಹುಡ್ಕೊ ಸಂಸ್ಥೆಯ ಸಾಲದ ಸಹಾಯ ಪಡೆಯಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಆ) ಹುಡ್ಕೊ ಸಂಸ್ಥೆಯ ಸಾಲದ ಸಹಾಯ ಬಂದ ಕೂಡಲೇ ಜಿಲ್ಲಾ ಕಛೇರಿಗಳ ಸಂಕೀರ್ಣಗಳ ನಿರ್ಮಾಣಕ್ಕಾಗಿ ರಚಿತವಾಗಿರುವ ರಾಜ್ಯಮಟ್ಟದ ಸಮಿತಿಯು ಸಭೆ ಸೇರಿ ಈ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿದೆ.

ಇ) ಹುಡ್ಕೊ ಸಂಸ್ಥೆಯಿಂದ ಮೊತ್ತ ಬಿಡುಗಡೆಯಾದ ಮೇಲೆ ಜಾಗತಿಕ ಟೆಂಡರುಗಳನ್ನು ಕರೆದು ಟರ್ನ್-ಕೀ ಆಧಾರದ ಮೇಲೆ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳ ಹಿಂದೆಯೇ ಹೊಸದಾಗಿ ಏಳು ಜಿಲ್ಲೆಗಳು ರಚನೆಯಾಗಿವೆ. ನಮ್ಮ ಚಾಮರಾಜನಗರ ಜಿಲ್ಲೆಯಾದಾಗಿನಿಂದಲೂ ಒಂದು ಜಿಲ್ಲಾಧಿಕಾರಿಗಳ ಕಚೇರಿ ನಿರ್ಮಾಣವಾಗಬೇಕೆಂದು ನಾವು ಕಳೆದ ಬಾರಿಯಿಂದ ಒತ್ತಾಯ ಮಾಡಿ ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಆದರೆ ಇದುವರೆಗೂ ಕೂಡ ಯಾವುದೇ ರೀತಿಯ ಪ್ರಗತಿಯಾಗಿಲ್ಲ. ಇವರು ''ಜಿಲ್ಲಾ ಕಚೇರಿ ಸಮುಚ್ಚಯ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ?'' ಎಂದು ಕೇಳಿದ್ದಕ್ಕೆ ''ಹೌದು'' ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇದುವರೆಗೆ ಪ್ರಗತಿ ಏನಾಗಿದೆ ಎಂದರೆ ''ಹುಡ್ಕೊ ಸಂಸ್ಥೆಯ ಸಾಲದ ಸಹಾಯ ಪಡೆಯುವ ಹಾಗೂ ನಿವೇಶನಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ'' ಎಂದು ಹೇಳಿದ್ದಾರೆ. ಮೂರು